ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು–560 003

ಅಧಿಸೂಚನೆ ಸಂಖ್ಯೆ:ಪಿಸಿಸಿಎಫ್:ಸಿ:ಸಿಆರ್-5/ಮು.ತಂತಿ/:2011-12 ದಿನಾಂಕ : 19 09-2011

## ಇ–ಟೆಂಡರ್ ಅಧಿಸೂಚನೆ

ವಿಷಯ : ಮುಳ್ಳುತಂತಿ, ಚೈನ್‌ಲಿಂಕ್ ಮೆಶ್ ಹಾಗೂ ಸಾದಾ ತಂತಿ ಪೂರೈಕೆಗಾಗಿ ಅರ್ಹತಾಪೂರ್ವ "ಇ" ಟೆಂಡರ್ ದರದ ಪ್ರಕಟಣೆ ಬಗ್ಗೆ

* * * *

ಕರ್ನಾಟಕ ಅರಣ್ಯ ಇಲಾಖೆಯಲ್ಲಿ 2011–12 ನೇ ಸಾಲಿನಲ್ಲಿ ನವೆಂಬರ್ 2011 ರಿಂದ ಅಕ್ಟೋಬರ್ 2012 ರವರೆಗಿನ ಅವಧಿಯಲ್ಲಿ ಮುಳ್ಳುತಂತಿ, ಚೈನ್‌ಲಿಂಕ್ ಮೆಶ್ ಹಾಗೂ ಸಾದಾ ತಂತಿಯನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಸರ್ಕಾರದಿಂದ ಪರವಾನಗಿ ಪಡೆದ ಆಸಕ್ತ ಉದ್ದಿಮೆ/ಉತ್ಪಾದಕರಿಂದ ಅರ್ಜಿಗಳನ್ನು ಈ ಕಚೇರಿಯ ಅಧಿಸೂಚನೆ ದಿನಾಂಕ 19–09–2011 ರಲ್ಲಿ ಆಹ್ವಾನಿಸಲಾಗಿದೆ. ಈ ಕೆಳಕಂಡಂತೆ ಸಂಕ್ಷಿಪ್ತ ಟೆಂಡರ್ ದರ / ಪ್ರಕಟಣೆಯನ್ನು ಪ್ರಕಟಣೆಯ ಮೂಲಕ ಸೆಳೆಯಲಾಗಿದೆ ಹೆಚ್ಚಿನ ವಿವರಗಳನ್ನು http://eproc.karnataka.gov.in ಹಾಗೂ ಇಲಾಖೆಯ http://www.karnatakaforest.gov.in ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮುಳ್ಳುತಂತಿಗೆ ಮತ್ತು ಸಾದಾ ತಂತಿಗೆ ಪ್ರತಿ ಟನ್ನಿಗೆ ಮತ್ತು ಚೈನ್ ಲಿಂಕ್ ಮೆಶ್‌ಗೆ ಒಂದು ಚದರ ಅಡಿಗೆ ಅನ್ವಯಿಸುವ ದರವನ್ನು ನಮೂದಿಸಿ ಆಸಕ್ತಿಯಿರುವ ಸರಬರಾಜುದಾರರು ತಾಂತ್ರಿಕ ಮತ್ತು ಆರ್ಥಿಕ ಅರ್ಜಿಯನ್ನು ದಿನಾಂಕ: 18–11–2011ರ ಸಂಜೆ 5.30 ರೊಳಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವ ನಿರ್ದೇಶನದ ಪ್ರಕಾರ ಸಲ್ಲಿಸತಕ್ಕದ್ದು. ತಾಂತ್ರಿಕ ಹರಾಜಿಗೆ (Technical Bid) ಸ್ವೀಕರಿಸಲಾದ ಅರ್ಜಿಗಳನ್ನು ದಿನಾಂಕ ~~19~~ 21–11–2011 ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಹಾಗೂ ದರ ಟೆಂಡರ್‌ಗಳಲ್ಲಿ ಆಯ್ಕೆಯಾದ ಸಂಸ್ಥೆಗಳ ಪಟ್ಟಿಯನ್ನು ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

**ಕರ್ನಾಟಕ ಸರ್ಕಾರ**

**ಕರ್ನಾಟಕ ಅರಣ್ಯ ಇಲಾಖೆ**

ಅಧಿಸೂಚನೆ ಸಂಖ್ಯೆ: ಪಿಸಿಸಿಎಫ್.ಸಿ–ಸಿಆರ್–5–ಮುಳ್ಳುತಂತಿ/2011–12 ದಿನಾಂಕ –09–2011

## ಇ–ಟೆಂಡರ್ ಅಧಿಸೂಚನೆ

**ವಿಷಯ** : ಮುಳ್ಳುತಂತಿ, ಚೈನ್‌ಲಿಂಕ್ ಮೆಷ್ ಮತ್ತು ಸಾದಾ ತಂತಿಗಳನ್ನು ಸರಬರಾಜು ಮಾಡಲು ಅರ್ಹ ಉತ್ಪಾದಕರ ಸಂಭಾವ್ಯ ಪಟ್ಟಿ ತಯಾರಿಸುವ ಬಗ್ಗೆ ಮತ್ತು ಮುಳ್ಳುತಂತಿ, ಚೈನ್‌ಲಿಂಕ್ ಮೆಷ್ ಮತ್ತು ಸಾದಾ ತಂತಿಗಳ ದರ ನಿಷ್ಕರ್ಷಿಸುವ ಬಗ್ಗೆ ಅರ್ಹತಾಪೂರ್ವ "ಇ" ಟೆಂಡರು.

* * * *

ಕರ್ನಾಟಕ ಅರಣ್ಯ ಇಲಾಖೆಯು 2011-12ರಲ್ಲಿ ಅರಣ್ಯ ವಿಭಾಗಗಳಿಗೆ ನವೆಂಬರ್ 2011 ರಿಂದ ಅಕ್ಟೋಬರ್ 2012ರ ಅವಧಿಯಲ್ಲಿ ಮುಳ್ಳುತಂತಿ, ಚೈನ್‌ಲಿಂಕ್ ಮೆಷ್ ಮತ್ತು ಸಾದಾ ತಂತಿಗಳನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ, ಮುಳ್ಳುತಂತಿ, ಚೈನ್‌ಲಿಂಕ್ ಮೆಷ್ ಮತ್ತು ಸಾದಾ ತಂತಿಗಳ ಉತ್ಪಾದಕ ಉದ್ದಿಮೆ ಘಟಕಗಳ ಗಮನವನ್ನು ಈ ಪ್ರಕಟಣೆಯ ಕಡೆಗೆ ಈ ಮೂಲಕ ಸೆಳೆಯಲಾಗಿದೆ.

ಅರ್ಜಿದಾರರು ತಾಂತ್ರಿಕ ಮತ್ತು ಆರ್ಥಿಕ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟರ್ ಪೋರ್ಟಲ್ ಮೂಲಕ ಸಲ್ಲಿಸತಕ್ಕದ್ದು.

1. ಅರ್ಜಿದಾರರು ಟೆಂಡರ್ ಫಾರಂನ್ನು ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ http://eproc.karnataka.gov.in ಹಾಗೂ http://www.karnatakaforest.gov.in ಇಲಾಖೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

2. 2011–12ನೇ ಸಾಲಿನಲ್ಲಿ ನಡೆಸಲಾಗುವ ಇ–ಟೆಂಡರನ್ನು 3 ಘಟಕಗಳನ್ನಾಗಿ ವಿಂಗಡಿಸಲಾಗಿದೆ. ಅರ್ಜಿದಾರರು ಪ್ರತಿಯೊಂದು ಘಟಕಕ್ಕೂ ಪ್ರತ್ಯೇಕವಾಗಿ ಈ ಕೆಳಗೆ ನಮೂದಿಸಿರುವಂತೆ ಇಎಂಡಿ ಮತ್ತು ಬ್ಯಾಂಕ್ ಗ್ಯಾರಂಟಿಗಳನ್ನು ಸಲ್ಲಿಸಲು ಸೂಚಿಸಿದೆ.

3. ಅರ್ಜಿದಾರರು ಅರ್ಜಿ ಶುಲ್ಕವಾಗಿ ₹550/– (ಐದುನೂರ ಐವತ್ತು ರೂಪಾಯಿ) ಮಾತ್ರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವ ನಿರ್ದೇಶನದ ಪ್ರಕಾರ ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು. ಈ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

4. ಅರ್ಜಿದಾರರು ಪ್ರತಿಯೊಂದು ಘಟಕಕ್ಕೂ ಇಎಂಡಿ ಹಣ ₹25,000/– (ಇಪ್ಪತ್ತೈದು ಸಾವಿರ ರೂಪಾಯಿ) ಮಾತ್ರವನ್ನು ಮುಂಗಡ ಠೇವಣಿಯಾಗಿ ಈ ಕೆಳಗೆ ನಮೂದಿಸಿದ ನಾಲ್ಕು ವಿಧದಲ್ಲಿ ಯಾವುದಾದರೂ ಒಂದರ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಿರ್ದೇಶಿಸಿರುವಂತೆ ಕರ್ನಾಟಕ ಸರ್ಕಾರದ ಕೇಂದ್ರೀಕೃತ ಖಾತೆಗೆ ಜಮೆ ಮಾಡತಕ್ಕದ್ದು, ಸದರಿ ಪಾವತಿಯನ್ನು ದೃಢಪಡಿಸಿಕೊಂಡ ನಂತರವೇ ಒಪ್ಪಿಗೆಗೆ ಪರಿಗಣಿಸಲಾಗುವುದು.

ಅ. ಕ್ರೆಡಿಟ್ ಕಾರ್ಡ್
ಆ. ಡೆಬಿಟ್ ಕಾರ್ಡ್
ಇ. ಎನ್ಇಎಫ್‌ಟಿ (ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಫಂಡ್ ಟ್ರಾನ್ಸ್‌ಫರ್)
ಈ. ಓಟಿಸಿ (ಓವರ್ ದಿ ಕೌಂಟರ್)

5. ಟೆಂಡರನ್ನು ದಿನಾಂಕ 18–11–2011ರಂದು ಸಂಜೆ 5.30 ಗಂಟೆಯವರೆಗೆ ಮಾತ್ರ ಸ್ವೀಕರಿಸಲಾಗುವುದು.

6. ತಾಂತ್ರಿಕ ಹರಾಜಿಗೆ (Technical Bid) ಸ್ವೀಕರಿಸಲಾದ ಅರ್ಜಿಗಳನ್ನು ದಿನಾಂಕ ~~19~~ 21–11–2011ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.

7. ದರ ಟೆಂಡರ್‌ಗಳಲ್ಲಿ ಆಯ್ಕೆಯಾದ ಸಂಸ್ಥೆಗಳ ಪಟ್ಟಿಯನ್ನು ದಿನಾಂಕ 23–11–2011 ರಂದು ಸಂಜೆ 4.30 ಗಂಟೆಗೆ ತೆರೆಯಲಾಗುವುದು.

8. ಟೆಂಡರ್ ಪ್ರಕ್ರಿಯೆಯಲ್ಲಿ ನಿಗದಿಪಡಿಸಿರುವ ದಿನಾಂಕಗಳಂದು ಅನಿರೀಕ್ಷಿತ ಸಂದರ್ಭದಲ್ಲಿ ಸರ್ಕಾರದಿಂದ ರಜೆ ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನದಲ್ಲಿ ಅದೇ ಸಮಯದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಲಾಗುವುದು.

9. ಮುಳ್ಳುತಂತಿ, ಚೈನ್‌ಲಿಂಕ್ ಮೆಷ್ ಮತ್ತು ಸಾದಾ ತಂತಿಗಳಿಗೆ ಅನ್ವಯಿಸುವ ದರವನ್ನು ಸಂಭಾವ್ಯ ಪಟ್ಟಿಯಲ್ಲಿ ಸೇರ್ಪಡೆಯಾದವರಿಂದ, ತರುವಾಯ ದರ ಟೆಂಡರ್ ಸ್ವೀಕೃತಿಯ ಮೂಲಕ ನಿಷ್ಕರ್ಶಿಸಲಾಗುವುದು. ಸಫಲ ಟೆಂಡರ್‌ದಾರ/ರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಕರಾರುನಾಮೆಯನ್ನು ಮಾಡಿಕೊಳ್ಳತಕ್ಕದ್ದು. ನಿಷ್ಕರ್ಶಿಸಲಾದ ದರವು 31-10-2012ರ ಅಂತ್ಯದವರೆಗೆ ಚಾಲ್ತಿಯಲ್ಲಿ ಇರುತ್ತದೆ.

10. ಟೆಂಡರ್ ದರಗಳನ್ನು ನಮೂದಿಸಬೇಕಾಗಿರುವ ಮುಳ್ಳುತಂತಿ ಮತ್ತು ಚೈನ್‌ಲಿಂಕ್ ಮೆಷ್ ಮತ್ತು ಸಾದಾ ತಂತಿಗಳ ಅಳತೆ ಮತ್ತು ಗುಣಮಟ್ಟದ ವಿವರ.

i. **BARBED WIRE** (Rate to be quoted per tonne, exclusive of taxes)

| Sl. No. | Gauge | Quality Specifications |
|---|---|---|
| 1 | 12 x 12 G | Good Quality of G I Barbed Wire with Zinc coating Thickness minimum of 100 GSM |
| 2 | 12 x 14 G | |
| 3 | 14 x 14 G | |

ii. **PLAIN WIRE** (Rate to be quoted per tonne, exclusive of taxes)

| Sl. No. | Gauge | Quality Specifications |
|---|---|---|
| 1 | 12 Gauge | G I Plain Wire with zinc coating thickness of minimum 100 GSM |
| 2 | 14 Gauge | G I Plain Wire with zinc coating of thickness of 100 GSM |

iii. **CHAIN LINK MESH** (Rate to be quoted per Sq. Feet, exclusive of taxes)

| Sl. No. | Gauge | Size | Quality Specifications |
|---|---|---|---|
| 1 | 8 Gauge | 2" x 2" | G I Chain Link with Heavy Zinc Coating Thickness minimum of 100 GSM |
| 2 | 10 Gauge | 2" x 2" | |
| 3 | 12 Gauge | 2" x 2" | |
| 4 | 8 Gauge | 3" x 3" | G I Chain Link with Heavy Zinc Coating Thickness minimum of 100 GSM |
| 5 | 10 Gauge | 3" x 3" | |
| 6 | 12 Gauge | 3" x 3" | |

- ದರಗಳನ್ನು ನಿರ್ಧಿಷ್ಟ ಸ್ಥಳಕ್ಕೆ ಸಾಗಾಣಿಕೆ ವೆಚ್ಚ ಸೇರಿದಂತೆ ನಮೂದಿಸುವುದು.
- ಮೇಲ್ಕಂಡ ಐಟಂಗಳಿಗೆ ತೆರಿಗೆಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.

***ಟಿಪ್ಪಣಿ***

2011–12ನೇ ಸಾಲಿನಲ್ಲಿ ಪ್ರತಿ ವಿಭಾಗದಲ್ಲಿನ ಆಯವ್ಯಯ ಹಾಗೂ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆಯ ಮೇರೆಗೆ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಲ್ಲಿಸುವ ಪೂರೈಕೆ ಆದೇಶದಲ್ಲಿ ನಮೂದಿಸಿರುವ ಪ್ರಮಾಣದ ಮತ್ತು ಮೇಲಿನ ಪಟ್ಟಿಯಲ್ಲಿ ಅನುಮೋದಿಸಿರುವ ಗುಣಮಟ್ಟದ ಸಾಮಗ್ರಿಗಳನ್ನು ಪೂರೈಕೆ ಆದೇಶ ಪಡೆದ ಹದಿನೈದು ದಿನಗಳ ಅವಧಿಯಲ್ಲಿ ಪೂರೈಸತಕ್ಕದ್ದು. ಮುಳ್ಳುತಂತಿ ಮತ್ತು ಚೈನ್ ಲಿಂಕ್ ಮೆಷ್ ಮತ್ತು ಸಾದಾ ತಂತಿಗಳನ್ನು ಅನುಬಂಧ–1ಐರಲ್ಲಿ ಲಗತ್ತಿಸಿರುವ ವಿಭಾಗ ಕಚೇರಿಗಳ ವಿಳಾಸಕ್ಕೆ ಮಾತ್ರ ಪೂರೈಸತಕ್ಕದ್ದು.

11. **ಸಲ್ಲಿಸಬೇಕಾದ ವಿವರಗಳು :**

i) ಸಕ್ಷಮ ಪ್ರಾಧಿಕಾರದಿಂದ ಉತ್ಪಾದಕರ ಉದ್ದಿಮೆ ನೋಂದಣಿಯಾದ/ಮಾಲೀಕತ್ವದ ದೃಢೀಕರಣ ಪತ್ರ.

ii) ಉತ್ಪಾದಕ ಉದ್ದಿಮೆ ಕಚೇರಿಯ ಪೂರ್ಣ ಅಂಚೆ ವಿಳಾಸ, ದೂರವಾಣಿ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ ಮತ್ತು ವಿದ್ಯುನ್ಮಾನ ಅಂಚೆ ಐಡಿ.

iii) ಉತ್ಪಾದಕ ಉದ್ದಿಮೆ ಘಟಕವನ್ನು ವಾಸ್ತವವಾಗಿ ಸ್ಥಾಪಿಸಲಾದ ಸ್ಥಳದ ವಿವರ, ಸಂಪೂರ್ಣ ಅಂಚೆ ವಿಳಾಸ, ದೂರವಾಣಿ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ.

iv) ಸಕ್ಷಮ ಪ್ರಾಧಿಕಾರದಿಂದ ಮೌಲ್ಯ ವರ್ಧಿತ ತೆರಿಗೆ (VAT) ದೃಢೀಕರಣ ಪತ್ರ ಹಾಗೂ 2009-10 ಮತ್ತು 2010-11ನೇ ಸಾಲಿನಲ್ಲಿ ಪಾವತಿಸಿದ ಮೌಲ್ಯ ವರ್ಧಿತ ತೆರಿಗೆ ಬಗ್ಗೆ ದೃಢೀಕರಣ ಪತ್ರ.

v) 2009-10 ಮತ್ತು 2010-11ರ ವರ್ಷಗಳಿಗೆ ಸಕ್ಷಮ ಪ್ರಾಧಿಕಾರದಿಂದ ಆದಾಯ ತೆರಿಗೆ ತೀರುವಳಿ ಮಾಡಿದ ಬಗ್ಗೆ ದೃಢೀಕರಣ ಪತ್ರ.

vi) ಉತ್ಪಾದಕ ಉದ್ದಿಮೆಯಲ್ಲಿ ಉತ್ಪಾದಿಸಲಾಗುವ ಸಾಮಗ್ರಿಗಳ ವಿವರ ಮತ್ತು ತಾಂತ್ರಿಕ ಗುಣಮಟ್ಟಗಳ ತಪಶೀಲು, ಉದ್ದಿಮೆಯ ಸ್ಥಾಪಿತ ಸಾಮರ್ಥ್ಯ ಮತ್ತು ಅಳವಡಿಸಿಕೊಳ್ಳಲಾದ ತಾಂತ್ರಿಕತೆ ವಿವರ.

vii) ಕಚ್ಚಾ ವಸ್ತುಗಳ ಮೂಲ, ಕಚ್ಚಾ ವಸ್ತುವನ್ನು ಪಡೆಯಲು ಉತ್ಪಾದಕ ಉದ್ದಿಮೆಯು ಹೊಂದಿರುವ ಈಗಿನ ವ್ಯವಸ್ಥೆ, ಈ ಸಂಬಂಧ ಯಾವುದೇ ಇತಿಮಿತಿಗಳಿದ್ದರೆ, ಅವುಗಳ ವಿವರಣೆಯೊಂದಿಗೆ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸುವುದು.

viii) ಉತ್ಪಾದಕ ಉದ್ದಿಮೆಯ ಅಧಿಕೃತ ಬ್ಯಾಂಕು/ಗಳು, ಬ್ಯಾಂಕುಗಳ ದೃಢೀಕರಣ ಪತ್ರದೊಂದಿಗೆ.